ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 04-02-1980.

# *ಭಾಗ್ಯವಿದಾತ ತಂದೆ ಮತ್ತು ಭಾಗ್ಯಶಾಲಿ ಮಕ್ಕಳು*

(भाग्य विधाता बाप और भाग्यशाली बच्चे)

ಇಂದು ಜ್ಞಾನದಾತ, ಭಾಗ್ಯವಿದಾತ ತಂದೆಯು ಮಕ್ಕಳ ಭಾಗ್ಯವನ್ನು ನೋಡುತ್ತಿದ್ದಾರೆ. ಸರ್ವಶ್ರೇಷ್ಠ ಆತ್ಮರ ಭಾಗ್ಯವು ಎಷ್ಟೊಂದು ಶ್ರೇಷ್ಠವಾಗಿದೆ ಮತ್ತು ಹೇಗೆ ಶ್ರೇಷ್ಠವಾಯಿತು? ಹೇಗೆ ತಾವೆಲ್ಲರೂ ತಂದೆಯ ಪರಿಚಯವನ್ನು ಕೊಡುತ್ತೀರಿ. ಆಗ ವಿಶೇಷವಾಗಿ 6 ಮಾತುಗಳನ್ನು ತಿಳಿಸುತ್ತೀರಿ. ಅದರ ಮೂಲಕ ತಂದೆಯ ಪರಿಚಯವು ಸ್ಪಷ್ಟ ಮಾಡುತ್ತೀರಿ. ಒಂದು ವೇಳೆ ಈ ಆರುಮಾತುಗಳನ್ನು ತಿಳಿದುಕೊಂಡರೆ ಆತ್ಮನು ಶ್ರೇಷ್ಠಪದವಿಯನ್ನು ಪಡೆಯಬಹುದು. ವರ್ತಮಾನ ಮತ್ತು ಭವಿಷ್ಯವೆರಡರಲ್ಲಿ ಸರ್ವಪ್ರಾಪ್ತಿಯ ಅಧಿಕಾರಿಯಾಗಲು ಸಾಧ್ಯವಾಗುತ್ತದೆ. ಇದೇ ರೀತಿ ಬಾಪ್‌ದಾದಾರವರೂ ಸಹ ಮಕ್ಕಳ ಭಾಗ್ಯವನ್ನು ಆರು ವಿಷಯಗಳ ಆಧಾರದಿಂದ ನೋಡುತ್ತಿದ್ದರು. ಆ ಆರು ವಿಷಯಗಳನ್ನು ಬಹಳ ಚೆನ್ನಾಗಿ ತಿಳಿದಿದ್ದೀರಾ?

1. ತಾವು ಶ್ರೇಷ್ಠ ಆತ್ಮರ ಹೆಸರಿನಲ್ಲಿಯೂ ಭಾಗ್ಯವಿದೆ:- ವಿಶ್ವದ ಆತ್ಮರು ತಮ್ಮ ಹೆಸರನ್ನು ಈಗಲೂ ವರ್ಣನೆ ಮಾಡುತ್ತಾರೆ. ಹೇಗೆಂದರೆ “ಬ್ರಾಹ್ಮಣರು ಶಿಖೆಯ ಸಮಾನ", ತಮ್ಮ ಬ್ರಾಹ್ಮಣ ಎಂಬ ಹೆಸರಿನಿಂದ ಇಂದಿನ ನಾಮಧಾರಿ ಬ್ರಾಹ್ಮಣರಿಗೆ ಅಂತಿಮಸಮಯದವರೆಗೂ ಶ್ರೇಷ್ಠರೆಂದು ಗಾಯನವಾಗುತ್ತಿದೆ. ಈಗಿನವರೆಗೂ ಕಾರ್ಯವು ಬದಲಾಗಿದೆ ಆದರೆ ಹೆಸರಿನ ಮಾನ್ಯತೆಯು ಸಿಗುತ್ತಿದೆ. ಹಾಗೆಯೇ 'ಪಾಂಡವ ಸೇನೆ', ಈಗಿನವರೆಗೂ ಈ ಪಾಂಡವ ಎಂಬ ಹೆಸರಿನಿಂದ ಹೃದಯವಿಧೀರ್ಣ(ಮನಸ್ಸಿನಿಂದ ಬಲಹೀನ) ಆತ್ಮನಿಗೆ- ಐದುಪಾಂಡವರ ಸಮಾನ ತಂದೆಯ ಜೊತೆಯನ್ನು ತೆಗೆದುಕೊಳ್ಳುವುದರಿಂದ ವಿಜಯಿಯಾಗುತ್ತೇವೆ ಎನ್ನುವುದು ಸ್ವಯಂನ್ನು ಉತ್ಸಾಹಿತನನ್ನಾಗಿ ಮಾಡುತ್ತದೆ. ಸ್ವಲ್ಪವಿದ್ದರೂ ಪರವಾಗಿಲ್ಲ, ಪಾಂಡವರು ಸದಾ ವಿಜಯಿಯಾಗಿದ್ದರು. ನಾವೂ ವಿಜಯಿಯಾಗಲು ಸಾಧ್ಯವಿದೆ. ಇದೇ ರೀತಿ 'ಗೋಪ-ಗೋಪಿಕೆಯರು'. ಇಂದಿನವರೆಗೂ ಗೋಪ ಗೋಪಿಕೆಯರ ಮಹಿಮೆಯನ್ನು ಮಾಡುತ್ತಾ ಖುಷಿಯಲ್ಲಿ ಬಂದುಬಿಡುತ್ತಾರೆ. ಹೆಸರನ್ನು ಕೇಳುತ್ತಿದ್ದಂತೆಯೇ ಪ್ರೇಮದಲ್ಲಿ ಲವಲೀನವಾಗಿ ಬಿಡುತ್ತಾರೆ. ಈ ರೀತಿ ತಮ್ಮ ಹೆಸರಿನಲ್ಲಿಯೂ ಭಾಗ್ಯವಿದೆ.

2. ರೂಪದ ಭಾಗ್ಯವೂ ಇದೆ:- ಈಗಿನವರೆಗೂ ಭಕ್ತರು ಶಕ್ತಿಯ ರೂಪದ ದರ್ಶನಕ್ಕಾಗಿ ಮಳೆ-ಚಳಿಯನ್ನು ಸಹನೆ ಮಾಡುತ್ತಿದ್ದಾರೆ. ಇಲ್ಲಂತೂ ಆರಾಮವಿದೆ. ಅವರಂತೂ ಧರಣಿ ಮತ್ತು ಆಕಾಶದ ಮಧ್ಯದಲ್ಲಿ ನಿಂತು-ನಿಂತಿದ್ದಂತೆಯೇ ತಪಸ್ಸು ಮಾಡುತ್ತಾರೆ. ಅಂದಮೇಲೆ ಶಕ್ತಿಯರ ರೂಪದಲ್ಲಿ, ದೇವಿ-ದೇವತೆಗಳ ರೂಪದಲ್ಲಿ ಪೂಜ್ಯರಾಗುವ ಭಾಗ್ಯವಿದೆ. ಎರಡೂ ರೂಪದಲ್ಲಿ ಪೂಜ್ಯರಾಗುತ್ತೀರಿ ಅಂದಮೇಲೆ ರೂಪದ ಗಾಯನ ಹಾಗೂ ಪೂಜ್ಯರಾಗುವ ಭಾಗ್ಯವೂ ಇದೆ. ವಿಶೇಷವಾಗಿ ಪೂಜ್ಯರಾಗುವ ಭಾಗ್ಯವೂ ಇದೆ.

3. ತಮ್ಮ ಗುಣಗಳ ಭಾಗ್ಯವಿದೆ:- ಇಂದಿನವರೆಗೂ ಕೀರ್ತನೆಯ ರೂಪದಲ್ಲಿ ವರ್ಣನೆ ಮಾಡುತ್ತಿದ್ದಾರೆ. ಇಂತಹ ವರ್ಣನೆ ಮಾಡುತ್ತಾರೆ ಆದರಿಂದ ತಮ್ಮ ಗುಣಗಳ ಭಾಗ್ಯದ ಪ್ರಭಾವವು ಅಲ್ಪಕಾಲಕ್ಕಾಗಿ ಕೀರ್ತನೆ ಮಾಡುವವರಿಗೂ ಶಾಂತಿ ಮತ್ತು ಖುಷಿಯ, ಆನಂದದ ಅನುಭವ ಆಗುತ್ತದೆ. ಇದು ಗುಣಗಳ ಭಾಗ್ಯವಾಗಿದೆ. ಮತ್ತೆ ಮುಂದೆಸಾಗಿರಿ-

4. ಕರ್ತವ್ಯದ ಭಾಗ್ಯ:- ಈಗಿನವರೆಗೆ ಇಡೀ ವರ್ಷದಲ್ಲಿ ಭಿನ್ನ ಭಿನ್ನ ಪ್ರಕಾರದ ಉತ್ಸವವನ್ನು ಆಚರಿಸುತ್ತಾರೆ. ತಾವು ಶ್ರೇಷ್ಠಾತ್ಮರು ಅನೇಕ ಪ್ರಕಾರದ ಸಾಧನಗಳ ಮೂಲಕ ಆತ್ಮರ ಜೀವನದಲ್ಲಿ ಉತ್ಸಾಹವನ್ನು ಕೊಟ್ಟಿದ್ದೀರಿ. ಆದ್ದರಿಂದ ಕರ್ತವ್ಯದ ಭಾಗ್ಯದ ಚಿಹ್ನೆಯಾಗಿ ಉತ್ಸವವನ್ನಾಚರಿಸುತ್ತಾರೆ. ಮುಂದೆಸಾಗಿರಿ-

5. ನಿವಾಸ ಸ್ಥಾನ:- ನಿವಾಸಸ್ಥಾನ ಅರ್ಥಾತ್ ಇರುವ ಧಾಮವಾಗಿದೆ. ಅದರ ನೆನಪಾರ್ಥವು(ಸ್ಮೃತಿಚಿಹ್ನೆ) ತೀರ್ಥಸ್ಥಾನ'ವಾಗಿದೆ. ತಮ್ಮ ಸ್ಥಾನವೂ ಸಹ ಇಷ್ಟು ಭಾಗ್ಯದ್ದಾಗಿದೆ. ಆ ಸ್ಥಾನವು ತೀರ್ಥಸ್ಥಾನವಾಗಿಬಿಟ್ಟಿದೆ. ಅದರ ಮಣ್ಣಿನದೂ ಭಾಗ್ಯವಿದೆ. ಒಂದು ವೇಳೆ ತೀರ್ಥಸ್ಥಾನದ ಮಣ್ಣನ್ನೂ ಸಹ ಮಸ್ತಕದಲ್ಲಿ ಇಟ್ಟುಕೊಂಡು ತನ್ನನ್ನು ಭಾಗ್ಯಶಾಲಿ ಎಂದು ತಿಳಿಯುತ್ತಾರೆ. ಆ ಸ್ಥಾನದ ಭಾಗ್ಯವಿದೆ ಮತ್ತು ಮುಂದೆ

6. ಈ ಸಂಗಮದ ಸಮಯದ ಭಾಗ್ಯದ ವರ್ಣನೆಯನ್ನು ವಿಶೇಷವಾಗಿ ಅಮೃತವೇಳೆಯ ರೂಪದಲ್ಲಿ ಗಾಯನವಾಗುತ್ತದೆ. ಅಮೃತವೇಳೆ ಅರ್ಥಾತ್ ಅಮೃತದ ಮೂಲಕ ಅಮರರಾಗುವ ವೇಳೆಯಾಗಿದೆ. ಜೊತೆಜೊತೆಯಲ್ಲಿ ಧರ್ಮದ ಯುಗ 'ಪುರುಷೋತ್ತಮ ಯುಗ'ವಾಗಿದೆ. ಸಂಜೆಯ ಸಮಯವೂ ಶ್ರೇಷ್ಠಭಾಗ್ಯವೆಂದು ಒಪ್ಪುತ್ತಾರೆ. ಇದೆಲ್ಲಾ ಸಮಯದ ಗಾಯನವು ತಮ್ಮ ಈ ಸಮಯದ ಗಾಯನವಾಗಿದೆ. ಅಂದಮೇಲೆ ತಮ್ಮ ಶ್ರೇಷ್ಠಭಾಗ್ಯವನ್ನು ತಿಳಿದಿರಾ?

ಇಂದು ಬಾಪ್‌ದಾದಾರವರು ಪ್ರತಿಯೊಂದು ಮಕ್ಕಳ ಭಾಗ್ಯವನ್ನು, ವಿಶೇಷವಾಗಿ ಈ 6 ಮಾತುಗಳಿಂದ ನೋಡುತ್ತಿದ್ದಾರೆ. 6 ಪ್ರಕಾರದ ಭಾಗ್ಯವನ್ನು ಎಷ್ಟು ಪ್ರತಿಶತ ಮಾಡಿಕೊಂಡಿದ್ದೀರಿ. ತಮ್ಮ ಶ್ರೇಷ್ಠಹೆಸರಿನ ಸ್ಮೃತಿಯಲ್ಲಿ ಎಲ್ಲಿಯವರೆಗೆ ಇರುತ್ತೀರಿ, ಎಷ್ಟು ಸಮಯವಿರುತ್ತೀರಿ ಮತ್ತು ಯಾವ ಸ್ಥಿತಿಯಲ್ಲಿರುತ್ತೀರಿ. ತಮ್ಮ ದಿವ್ಯಗುಣವಿರುವ ದೇವತಾರೂಪ ಅಥವಾ ಮಾಸ್ಟರ್ ಸರ್ವಶಕ್ತಿವಂತನ ರೂಪ- ಎರಡೂ ರೂಪದಲ್ಲಿ ಎಲ್ಲಿಯವರೆಗೆ ಸಮರ್ಥ ಸ್ವರೂಪವಿರುತ್ತದೆ? ಈ ರೀತಿ ಪ್ರತಿಯೊಂದು ಮಾತಿನ ಫಲಿತಾಂಶವನ್ನು ನೋಡಿದರು. ತಿಳಿಸಿದೆವಲ್ಲವೆ- ಸೂಕ್ಷ್ಮ ವತನದಲ್ಲಿ ಪರಿಶೀಲನೆ ಮಾಡುವುದರಲ್ಲಿ ಪರಿಶ್ರಮವಾಗುವುದಿಲ್ಲ. ಸಂಕಲ್ಪದ ಸ್ವಿಚ್ ಆನ್ ಮಾಡಲಾಯಿತು ಮತ್ತು ಪ್ರತಿಯೊಬ್ಬರದೂ ಎಲ್ಲಾ ಪ್ರಕಾರದಲ್ಲಿ ಸಂಪೂರ್ಣವಾಗಿ ಇಮರ್ಜ್ ಆಗಿಬಿಡುತ್ತದೆ. ಸಾಕಾರ ಪ್ರಪಂಚದಂತೆ ಪರಿಶ್ರಮಪಡಬೇಕಾಗಿಲ್ಲ. ವಿಜ್ಞಾನದ ಯಾವ ಸಾಧನಗಳನ್ನಾದರೆ ಅವಿಷ್ಕಾರಗೊಳಿಸುತ್ತಾರೆಯೋ, ಅದರ ರಿಫೈನ್ ರೂಪವು ಮೊದಲಿಂದಲೇ ಇದೆ. ಈ ದೂರದರ್ಶನವಂತು ಈಗ ಬಂದಿದೆ ಆದರೆ ಸೂಕ್ಷ್ಮ ವತನದಲ್ಲಿ ತಾವು ಮಕ್ಕಳಿಗೆ ಸ್ಥೂಲವತನದ ದೃಶ್ಯವನ್ನು ಸ್ಥಾಪನೆಯ ಆದಿಯಲ್ಲಿಯೇ ತೋರಿಸುತ್ತಾ ಅನುಭವ ಮಾಡಿಸಿದ್ದೇವೆ. ವಿಜ್ಞಾನಿಗಳು ಪರಿಶ್ರಮಪಡುವ ಮಕ್ಕಳಾಗಿದ್ದಾರೆ, ಈಗ ನಕ್ಷತ್ರಗಳವರೆಗೆ ಹೋಗುವ ಪರಿಶ್ರಮಪಡುತ್ತಿದ್ದಾರೆ. ಚಂದ್ರಮನದಲ್ಲಿ ಏನೂ ಸಿಗುವುದಿಲ್ಲ, ಅಂದಮೇಲೆ ನಕ್ಷತ್ರಗಳೇ ಸರಿ. ಆದರೆ ತಾವು ಮಕ್ಕಳು ಸೈಲೆನ್ಸ್‌ನ ಶಕ್ತಿಯಿಂದ ನಕ್ಷತ್ರಗಳಿಗಿಂತಲೂ ದೂರವಿರುವ ಪರಮಧಾಮದ ಅನುಭವವನ್ನು ಆದಿಯಿಂದಲೂ ಮಾಡುತ್ತಿದ್ದೀರಿ. ಆದರೂ ಪ್ರತಿಯೊಂದು ಮಕ್ಕಳಿಗೆ ಪರಿಶ್ರಮದ ಫಲವು ಅವಶ್ಯವಾಗಿ ಸಿಗುತ್ತದೆ. ಅವರಿಗೂ ವಿಶ್ವದಲ್ಲಿ ಹೆಸರು-ಮಾನ್ಯತೆ-ಸ್ಥಾನ ಮತ್ತು ಸಫಲತೆಯ ಅಲ್ಪಕಾಲದ ಖುಷಿಯ ಪ್ರಾಪ್ತಿಯು ಆಗಿಬಿಡುತ್ತದೆ. ಇವರೂ ಸಹ ಡ್ರಾಮಾದಲ್ಲಿ ಪರವಶರಾಗಿದ್ದಾರೆ ಅರ್ಥಾತ್ ಪಾತ್ರಕ್ಕೆ ವಶರಾಗಿದ್ದಾರೆ. ದೇವತೆಗಳ ಮುಂದೆ ಪ್ರಕೃತಿಯು ವಜ್ರ ವೈಡೂರ್ಯಗಳ ತಟ್ಟೆಗಳನ್ನು ತುಂಬಿಕೊಂಡು ಬಂದಿತೆಂಬ ಯಾವ ಗಾಯನವಿದೆ. ಪೃಥ್ವಿ ಹಾಗೂ ಸಾಗರವು ತಮಗಾಗಿಯೇ ನಾಲ್ಕೂಕಡೆಯಲ್ಲಿ ಹರಡಿರುವಂತಹ ಚಿನ್ನ ಮತ್ತು ಮುತ್ತು, ವಜ್ರಗಳನ್ನು ಒಂದು ಸ್ಥಾನದಲ್ಲಿ ಸೇರಿಸುವುದಕ್ಕಾಗಿ ನಿಮಿತ್ತವಾಗುತ್ತವೆ. ಇದಕ್ಕೇ ಹೇಳಲಾಗುತ್ತದೆ- ತಟ್ಟೆಗಳನ್ನು ತುಂಬಿಕೊಂಡು ಬಂದಿತು. ತಟ್ಟೆಯಲ್ಲಿ ಚದುರಿರುವ ವಸ್ತುವು ಒಟ್ಟಿಗೆ ಸೇರಿಬಿಡುತ್ತದೆಯಲ್ಲವೆ. ಅಂದಮೇಲೆ ಈ ಭಾರತ ಹಾಗೂ ಅಕ್ಕಪಕ್ಕದ ಈ ಸ್ಥಾನವು ತಟ್ಟೆಯಾಗಿಬಿಡುತ್ತದೆ. ವಿಶ್ವದಮಾಲೀಕನಿಗಾಗಿ ಅವು ಸೇವಾಧಾರಿಯಾಗಿ ತಯಾರಿ ಮಾಡಿಕೊಂಡು ಬಂದು ತಮ್ಮ ಮುಂದೆ ಇಡುತ್ತಾರೆ. ಅದೇ ರೀತಿ ದೇವತೆಗಳಿಗಾಗಿ ಸರ್ವರಿದ್ಧಿ-ಸಿದ್ಧಿಯೂ ಸೇವಾಧಾರಿಯಾಗುತ್ತದೆ. ಯಾವ ಈ ಭಿನ್ನ-ಭಿನ್ನ ಪ್ರಕಾರದ ಸಾಧನಗಳ ಮೂಲಕ ಸಫಲತೆ ಅರ್ಥಾತ್ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತಾರೆಯೋ, ಇವೆಲ್ಲಾ ಸಿದ್ಧಿಗಳು ಅಂದರೆ ವಿಜ್ಞಾನದಲ್ಲಿಯೂ ರಿಫೈನ್‌ರೂಪ, ಸಫಲತಾರೂಪವು ಸಿದ್ಧಿಯ ರೂಪದಲ್ಲಿ ತಮಗೆ ಸೇವಾಧಾರಿಯಾಗುತ್ತವೆ. ಈಗಂತು ಆಕ್ಸಿಡೆಂಟ್ ಸಹ ಇದೆ ಮತ್ತು ಪ್ರಾಪ್ತಿಯೂ ಇದೆ. ಆದರೆ ರಿಫೈನ್ ಸಿದ್ಧಿರೂಪದಲ್ಲಿ ದುಃಖದ ಕಾರಣ ಸಮಾಪ್ತಿಯಾಗಿ, ಸದಾ ಸುಖ ಹಾಗೂ ಸಫಲತಾ ರೂಪವಾಗಿಬಿಡುತ್ತಾರೆ. ಭಿನ್ನ ಭಿನ್ನ ವಿಭಾಗದವರು ತಮ್ಮ-ತಮ್ಮ ಜ್ಞಾನದ ಸಿದ್ಧಿ, ಅನ್ವೇಷಣೆಯ ಸಿದ್ಧಿಯನ್ನು ತಮ್ಮ ಸೇವೆಯಲ್ಲಿ ತರುತ್ತಾರೆ, ಇದಕ್ಕೆ ಪ್ರಕೃತಿಯೂ ದಾಸಿ ಮತ್ತು ಸರ್ವಸಿದ್ಧಿಗಳ ಪ್ರಾಪ್ತಿಯಾಗುವುದು ಎಂದು ಹೇಳಲಾಗುತ್ತದೆ. ಆದೇಶ ಮಾಡಲಾಯಿತು

ಮತ್ತು ಕಾರ್ಯವಾಯಿತು. ಇದಕ್ಕೆ ಸಿದ್ಧಿಸ್ವರೂಪ ಎಂದು ಹೇಳಲಾಗುತ್ತದೆ. ಅಂದಮೇಲೆ ತಿಳಿಯಿತೆ! ತಮ್ಮ ಭಾಗ್ಯವು ಎಷ್ಟೊಂದು ದೊಡ್ಡದಾಗಿದೆ? ತಂದೆಯ ಭಾಗ್ಯವನ್ನಂತು ಆತ್ಮರು ವರ್ಣನೆ ಮಾಡುತ್ತಾರೆ ಆದರೆ ತಮ್ಮ ಭಾಗ್ಯವನ್ನು ತಂದೆಯು ವರ್ಣನೆ ಮಾಡುತ್ತಾರೆ. ಇದಕ್ಕಿಂತಲೂ ದೊಡ್ಡ ಭಾಗ್ಯವಾಗಿಲ್ಲ. ಆಗುವುದಿಲ್ಲ. ಈಗಂತು ಎಲ್ಲರಿಗೂ ಭಾಗ್ಯದ ನಕ್ಷತ್ರವು ಕಾಣಿಸುತ್ತಿದೆ. ಹೇಗೆ ಈಗ ಸ್ಪಷ್ಟವಾಗಿ ಕಾಣಿಸುತ್ತಿದೆಯೋ, ಹಾಗೆಯೇ ಸದಾ ತಮ್ಮ ಭಾಗ್ಯದ ನಕ್ಷತ್ರವು ಹೊಳೆಯುತ್ತಿರುವುದನ್ನು ನೋಡಿರಿ.

**ಇಂತಹ ಶ್ರೇಷ್ಠ ಭಾಗ್ಯಶಾಲಿ, ಸರ್ವಾತ್ಮರ ಭಾಗ್ಯಕ್ಕೆ ನಿಮಿತ್ತರಾಗಿರುವ ಆತ್ಮರು, ಸದಾ ಪ್ರಕೃತಿಜೀತರಾಗಿ ಪ್ರಕೃತಿಯನ್ನೂ ಸೇವಾಧಾರಿಯನ್ನಾಗಿ ಮಾಡುವಂತಹ, ಮಾಸ್ಟರ್ ಸರ್ವಶಕ್ತಿವಂತರಾಗಿ ಶಕ್ತಿಗಳ ಆಧಾರದ ಮೇಲೆ ಸರ್ವರಿದ್ಧಿ-ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳುವಂತಹ, ಈ ರೀತಿ ಸದಾ ಸರ್ವಶಕ್ತಿವಂತನಾಗಿ ವಿಶ್ವಕಲ್ಯಾಣಕಾರಿಯಾಗಿ, ವಿಶ್ವದ ಆತ್ಮರಿಗೆ ಮಹಾದಾನ ಹಾಗೂ ವರದಾನವನ್ನು ಕೊಡುವಂತಹ ಜ್ಞಾನದಾತ, ಭಾಗ್ಯವಿದಾತನ ಮಕ್ಕಳಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

**ವಾಯುಮಂಡಲವನ್ನು ಶಕ್ತಿಶಾಲಿಯನ್ನಾಗಿ ಮಾಡುವುದೇ ಬೇಹದ್ದಿನ ಸೇವೆಯಾಗಿದೆ:-**

**ನಿಮಿತ್ತ ಸೇವಾಧಾರಿ ಟೀಚರ್ಸ್ ಸಹೋದರಿಯರಪ್ರತಿ:-**

ಸೇವಾಧಾರಿ ಮಕ್ಕಳ ವಿಶೇಷವಾದ ಸೇವೆಯೇ ಆಗಿದೆ- 'ಸ್ವಯಂ ಸಂಪನ್ನವಾಗಿರುವುದು ಮತ್ತು ಸರ್ವರಿಗೂ ಮಾಡುವುದು' ಶಕ್ತಿಸ್ವರೂಪರಾಗಿರುವುದು ಮತ್ತು ಶಕ್ತಿಸ್ವರೂಪರನ್ನಾಗಿ ಮಾಡುವುದು. ಅಂದಮೇಲೆ ಇದೇ ಕಾರ್ಯದಲ್ಲಿ ವ್ಯಸ್ತರಾಗಿದ್ದೀರಾ? ಕೋರ್ಸ್ ಮಾಡಿಸುವುದು, ಭಾಷಣ ಮಾಡುವುದು- ಇದಂತು 7 ದಿನಗಳ ವಿದ್ಯಾರ್ಥಿಯೂ ಮಾಡಿಬಿಡುತ್ತಾರೆ. ಯಾವ ಕಾರ್ಯವನ್ನು ಯಾರೂ ಮಾಡಲು ಸಾಧ್ಯವಿಲ್ಲವೋ, ಅದನ್ನು ತಾವು ಮಾಡಬೇಕಾಗಿದೆ. ತಮ್ಮನ್ನು ನಿಮಿತ್ತರನ್ನಾಗಿ ಮಾಡಿರುವುದೇ ವಿಶೇಷ ಕಾರ್ಯಕ್ಕಾಗಿ, ಆ ವಿಶೇಷ ಕಾರ್ಯವಾಗಿದೆ ತಂದೆಯ ಮೂಲಕ ಪ್ರಾಪ್ತಿಯಾಗಿರುವ ವಿಶೇಷತೆಗಳನ್ನು ತಮ್ಮ ಶುಭಭಾವನೆ ಮತ್ತು ಶ್ರೇಷ್ಠಕಾಮನೆಯಿಂದ ನಿರ್ಬಲ ಆತ್ಮರಲ್ಲಿ ತುಂಬುವುದು. ತಮ್ಮ ಕಾರ್ಯವೇ ಆಗಿದೆ. ಸದಾ ಶುಭಭಾವನೆ ಮತ್ತು ಶ್ರೇಷ್ಠಕಾಮನಾ ಸ್ವರೂಪರಾಗುವುದು. ಶ್ರೇಷ್ಠ ಭಾವನೆಯ ಅರ್ಥವು ಇದಲ್ಲ- ಯಾರಲ್ಲಿಯೇ ಭಾವನೆಯನ್ನಿಡುತ್ತಾ- ಇಡುತ್ತಾ ಅವರಲ್ಲಿ ಭಾವನೆಯಿರುವವರಾಗಿ ಬಿಡುವುದು. ಈ ತಪ್ಪನ್ನೆಂದಿಗೂ ಮಾಡಬಾರದು ಏಕೆಂದರೆ ನಡೆಯುತ್ತಾ ನಡೆಯುತ್ತಾ ಉಲ್ಟಾ ಮಾಡಿಬಿಡುತ್ತಾರೆ. ಭಾವನೆಯಿರುವವರಾಗುವುದು ಅಂದರೆ ಅವರ ಭಕ್ತರಾಗಿ ಬಿಡುವುದು ಅರ್ಥಾತ್ ಅವರ ಗುಣಗಳ ಮೇಲೆ ಅರ್ಪಣೆಯಾಗಿ ಬಿಡುವುದು, ಅಂದಾಗ ಶುಭಭಾವನೆಯೂ ಬೇಹದ್ದಿನದಾಗಿರಲಿ, ಒಬ್ಬರ ಬಗ್ಗೆ ವಿಶೇಷ ಭಾವನೆಯಿರುವುದೂ ಸಹ ಹದ್ದಿನದಾಗಿದೆ. ಹದ್ದಿನಲ್ಲಿ ನಷ್ಟವಿದೆ, ಬೇಹದ್ದಿನಲ್ಲಿರುವುದಿಲ್ಲ. ವರ್ತಮಾನ ಸಮಯದಲ್ಲಿ ತಾವು ಮಕ್ಕಳ ಕಾರ್ಯವಾಗಿದೆ~ ತಮಗೆ ಪ್ರಾಪ್ತಿಯಾಗಿರುವ ಶಕ್ತಿಗಳ ಆಧಾರದ ಮೇಲೆ ಶುದ್ಧ ವೈಬ್ರೇಷನ್, ವಾಯುಮಂಡಲದ ಮೂಲಕ ನಿರ್ಬಲ ಆತ್ಮರನ್ನು ಶಕ್ತಿಶಾಲಿಯನ್ನಾಗಿ ಮಾಡುವುದು. ಇದೇ ಕಾರ್ಯದಲ್ಲಿ ಸದಾ ವ್ಯಸ್ತರಾಗಿರುತ್ತೀರಾ? ಕೋರ್ಸ್ ಮಾಡುವ ಸಮಯವು ಈಗ ಹೋಯಿತು, ಈಗ ಫೋರ್ಸ್ ಕೋರ್ಸ್‌ನ್ನು ಮಾಡಿಸಬೇಕಾಗಿದೆ. ಕೋರ್ಸ್ ಮಾಡಿಸುವವರು ಬೇರೆಯವರೂ ತಯಾರಾಗಿಬಿಟ್ಟಿದ್ದಾರೆ. ಆದ್ದರಿಂದ ತಾವು ವಾಯುಮಂಡಲವನ್ನು ಶಕ್ತಿಶಾಲಿಯನ್ನಾಗಿ ಮಾಡುವ ಸೇವೆಯನ್ನು ಮಾಡಿರಿ, ಏಕೆಂದರೆ ದಿನಕಳೆದಂತೆ ಪ್ರಪಂಚದ ವಾಯುಮಂಡಲವು ಮಾಯಾವೀಯಾಗುತ್ತಾ ಹೋಗುತ್ತಿದೆ. ಮಾಯೆಯೂ ಸಹ ಲಾಸ್ಟ್ ಚಾನ್ಸ್‌ನಲ್ಲಿ ತನ್ನ ಯಂತ್ರ-ಮಂತ್ರ ಮತ್ತು ಜಂತ್ರವೇನೆಲ್ಲವೂ ಇದೆಯೋ, ಅದೆಲ್ಲವನ್ನೂ ಉಪಯೋಗಿಸುತ್ತದೆ. ಅಟ್ಯಾಕ್ ಮಾಡುತ್ತದೆ ಅಲ್ಲವೆ? ಹಾಗೆಯೇ ವಿದಾಯಿಯನ್ನೂ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಇಂತಹ ವಾಯುಮಂಡಲದ ಮಧ್ಯದಲ್ಲಿ ತಮ್ಮ ಸೇವಾಸ್ಥಾನಗಳ ವಾಯುಮಂಡಲವನ್ನು ಬಹಳಷ್ಟು ಅವಕ್ತ ಹಾಗೂ ಶಕ್ತಿಶಾಲಿಯನ್ನಾಗಿ ಮಾಡಿಕೊಳ್ಳಬೇಕು. ಹೇಗೆ ತಮ್ಮ ಜಡಮಂದಿರಗಳ ವಾಯುಮಂಡಲವು ಎಂತಹ ಆತ್ಮನನ್ನಾದರೂ ತನ್ನ ಕಡೆ ಸೆಳೆಯುತ್ತದೆ. ಅಲ್ಪಕಾಲಕ್ಕಾಗಿ ಅಶಾಂತವು ಶಾಂತವಾಗಿಬಿಡುತ್ತದೆ. ಯಾವಾಗ ಜಡಚಿತ್ರಗಳ ಸ್ಥಾನದಲ್ಲಿಯೇ ಇಂತಹ ವಾಯುಮಂಡಲವಿದೆಯೆಂದರೆ, ಚೈತನ್ಯ

ಸೇವಾಸ್ಥಾನಗಳಲ್ಲಿ ಎಂತಹ ಶಕ್ತಿಶಾಲಿ ವಾಯುಮಂಡಲವಿರಬೇಕು? ಅಂದಮೇಲೆ ಪರಿಶೀಲನೆ ಮಾಡಿರಿ- ಇಂದಿನ ವಾಯುಮಂಡಲವು ಶಕ್ತಿಶಾಲಿಯಾಗಿತ್ತೆ? ಯಾರೇ ಬರುತ್ತಾರೆ, ಅವರು ವ್ಯಕ್ತ ಹಾಗೂ ವ್ಯರ್ಥದ ಮಾತುಗಳಿಂದ ದೂರವಾಗಿ ಬಿಡಬೇಕು. ಇದೇನು ನಡೆಯುತ್ತಾ ನಡೆಯುತ್ತಾ ಅನೇಕ ಪ್ರಕಾರದ ವಿಘ್ನಗಳು ಬೀಳುತ್ತವೆ ಅಥವಾ ಕೆಲವರು ವ್ಯಕ್ತಭಾವದಲ್ಲಿ ಬಂದು ಬಿಡುತ್ತಾರೆ, ಅಂದಾಗ ಅವರ ಕಾರಣದಿಂದ ವಾಯುಮಂಡಲದಲ್ಲಿ ವ್ಯಕ್ತಭಾವವಿದೆ. ಒಂದು ವೇಳೆ ಅವ್ಯಕ್ತವಾಗಿದ್ದರೆ ಯಾವುದೇ ವ್ಯಕ್ತಭಾವದ ಮಾತುಗಳನ್ನೇ ತೆಗೆದುಕೊಂಡು ಬರುತ್ತಾರೆಂದರೂ ಬದಲಾಗಿ ಬಿಡುತ್ತಾರೆ. ಹೇಗೆ ಜಡಮಂದಿರಗಳಲ್ಲಿ ಅಲ್ಪಕಾಲಕ್ಕಾಗಿ ಬದಲಾಗಿ ಬಿಡುತ್ತಾರಲ್ಲವೆ, ಇದು ಸದಾಕಾಲದ ಮಾತಾಗಿದೆ. ಏಕೆಂದರೆ ಅದು ಜಡವಾಗಿದೆ, ಇದು ಚೈತನ್ಯವಾಗಿದೆ. ಅಂದಮೇಲೆ ಈಗ ಕೇವಲ ಭಾಷಣ ಅಥವಾ ಪ್ರದರ್ಶನಿಯ ಲಿಸ್ಟ್‌ನ್ನು ಮಾಡಬಾರದು ಆದರೆ ಜೊತೆಜೊತೆಯಲ್ಲಿ ಶಕ್ತಿಶಾಲಿ ವಾಯುಮಂಡಲವನ್ನೂ ಪರಿಶೀಲನೆ ಮಾಡಿರಿ.

ವಾಯುಮಂಡಲವನ್ನು ಶಕ್ತಿಶಾಲಿಯನ್ನಾಗಿ ಮಾಡುವುದಕ್ಕಾಗಿ ಸಾಧನವೇನಿದೆ? ತಮ್ಮ ಅವ್ಯಕ್ತ ಸ್ವರೂಪದ ಸಾಧನೆಯಾಗಿದೆ. ಇದೇ ಸಾಧನವಾಗಿದೆ. ಇದರ ಬಗ್ಗೆ ಮತ್ತೆ-ಮತ್ತೆ ಗಮನವಿರಲಿ, ಯಾವ ಮಾತಿನ ಸಾಧನೆಯಿರುತ್ತದೆ, ಅದೇ ಮಾತಿನ ಮೇಲೆ ಗಮನವಿರುತ್ತದೆಯಲ್ಲವೆ. ಒಂದು ವೇಳೆ ಒಂಟಿ ಕಾಲಿನಲ್ಲಿ ನಿಂತಿರುವ ಸಾಧನೆಯಿದೆಯೆಂದರೆ, ಮತ್ತೆ-ಮತ್ತೆ ಇದೇ ಗಮನವಿರುತ್ತದೆ. ಅಂದಮೇಲೆ ಈ ಸಾಧನೆ ಅರ್ಥಾತ್ ಮತ್ತೆ-ಮತ್ತೆ ಗಮನವಿರುವ ತಪಸ್ಸಿರಬೇಕಾಗಿದೆ. ಪರಿಶೀಲನೆ ಮಾಡಿಕೊಳ್ಳಿರಿ ನಾನು ಅವ್ಯಕ್ತ ಫರಿಶ್ತೆಯಾಗಿದ್ದೇನೆಯೇ? ಒಂದು ವೇಳೆ ಸ್ವಯಂ ಆಗಿರುವುದಿಲ್ಲವೆಂದರೆ ಅನ್ಯರನ್ನು ಹೇಗೆ ಮಾಡಲು ಸಾಧ್ಯವಿದೆ?

ತಂದೆಯ ಯಾವುದೆಲ್ಲಾ ಸೂಚನೆಗಳು ಸಿಗುತ್ತವೆ, ಆ ಸೂಚನೆಗಳನ್ನು ತಿಳಿದುಕೊಂಡು ನಡೆಯುತ್ತಿರಬೇಕು. ಈಗ ಹೇಗೆ ಪುರುಷಾರ್ಥ ಮಾಡಲಿ? ಎಂದು ಕೇಳುವ ಸಮಯವು ಕಳೆದುಹೋಯಿತು. ಒಂದು ವೇಳೆ ತಾವೇ ಕೇಳುತ್ತಿರುತ್ತೀರೆಂದರೆ, ಇನ್ನು ಬರುವವರು ಏನು ಮಾಡುವರು? ಆದ್ದರಿಂದ ಭಿನ್ನ ಭಿನ್ನ ಪುರುಷಾರ್ಥದ ಯಾವ ಯುಕ್ತಿಗಳನ್ನು ತಿಳಿಸಿದ್ದೇವೆ, ಅದರಲ್ಲಿಂದ ಒಂದು ಯುಕ್ತಿಯನ್ನಾದರೂ ತಮ್ಮದನ್ನಾಗಿ ಮಾಡಿಕೊಳ್ಳುತ್ತೀರೆಂದರೆ ಸ್ವಯಂ ತಾವೂ ಸಫಲರಾಗುತ್ತೀರಿ ಮತ್ತು ಅನ್ಯರನ್ನೂ ಸಫಲರನ್ನಾಗಿ ಮಾಡಬಹುದು. ಅಂದಮೇಲೆ ಈಗ ಏನು ಮಾಡುವುದು ಮತ್ತು ಹೇಗೆ ಮಾಡುವುದು ಎನ್ನುವ ಭಾಷೆಯು ಸಮಾಪ್ತಿ, ಮುರಳಿಯಲ್ಲಿ ಪ್ರತಿ ನಿತ್ಯವೂ ಏನು ಮಾಡಲಿ ಮತ್ತು ಹೇಗೆ ಮಾಡಲಿ ಎನ್ನುವ ಮಾತಿನ ಪ್ರತ್ಯುತ್ತರವು ಸಿಕ್ಕಿದೆ. ಒಂದು ವೇಳೆ ಆದರೂ ಕೇಳುತ್ತೀರೆಂದರೆ ಅದರ ಅರ್ಥವಾಗಿದೆ ಮುರುಳಿಯನ್ನು ಪ್ರತ್ಯಕ್ಷದಲ್ಲಿ ತರುವ ಶಕ್ತಿಯು ಕಡಿಮೆಯಿದೆ.

ಇಷ್ಟಾದರೂ ಎಲ್ಲಾ ಸೇವಾಧಾರಿ ಮಕ್ಕಳಿಗೆ ಬಾಪ್‌ದಾದಾರವರು ಸಮಾನ ಜೊತೆಗಾರರು ಅರ್ಥಾತ್ ಮಿತ್ರರೆಂದು ತಿಳಿಯುತ್ತಾರೆ. ಆದ್ದರಿಂದ ಮಿತ್ರರಿಗೆ ಶುಭಾಷಯಗಳು. ಆದರೆ ತಮ್ಮ ಮಿತ್ರನ ಸಮಾನ ಇದೇ ರೀತಿ ಸದಾ ಸಫಲತಾಮೂರ್ತಿಯಾಗಿರಿ. ಒಂದು ವೇಳೆ ಒಬ್ಬ ಮಿತ್ರನು ಸದಾ ಸಫಲತಾಮೂರ್ತಿಯಾಗಿದ್ದಾನೆ ಮತ್ತು ಇನ್ನೊಬ್ಬ ಮಿತ್ರನು ನಿಧಾನ-ನಿಧಾನವಾಗಿ ನಡೆಯುವವನಾಗಿದ್ದರೆ, ಕೈಯಲ್ಲಿ ಕೈಯನ್ನಿಡಿದು ಒಟ್ಟಿಗೆ ಹೇಗೆ ನಡೆಯುತ್ತಾರೆ? ಮಿತ್ರನೆಂದರೆ ಸಮಾನ ಜೊತೆಗಾರ. ಹಿಂದಿಂದ ಬರುವವರನ್ನು ಮಿತ್ರನೆಂದು ಹೇಳುವುದಿಲ್ಲ. ತಂದೆಯು ಗುರಿಗೆ ಸಮೀಪವಿದ್ದಾರೆ ಮತ್ತು ಮಕ್ಕಳು ನಿಲ್ಲುವ ಹಾಗೂ ನಡೆಯುವವರಾಗಿದ್ದೀರಿ. ಆಗ ತಲುಪುವುದಕ್ಕೆ ಬದಲಾಗಿ ನೋಡುವವರ ಸಾಲಿನಲ್ಲಿ ಬಂದು ಬಿಡುತ್ತೀರಿ. ಅಂದಮೇಲೆ ಈ ರೀತಿ ಆಗುವುದಿಲ್ಲ ಅಲ್ಲವೆ? ಜೊತೆಯಲ್ಲಿ ನಡೆಯುವವರಾಗಿದ್ದೀರಲ್ಲವೆ?

ಪಾರ್ಟಿಯೊಂದಿಗೆ:- ಎಲ್ಲರೂ ತಮ್ಮನ್ನು ಅತಿಅದೃಷ್ಟವಂತನೆಂದು ತಿಳಿಯು ತ್ತೀರಾ? ಇಂತಹ ಅನುಭವ ಮಾಡುತ್ತೀರಾ- ನಾವು ಏನನ್ನು ನೋಡಿದೆವು, ನಾವು ಏನನ್ನು ಪಡೆದೆವು, ಅದನ್ನು ವಿಶ್ವದ ಆತ್ಮರು ಪಡೆಯಲು ಸಾಧ್ಯವಿಲ್ಲ. ಆ ಒಂದು ಹನಿಗಾಗಿಯೇ ಬಾಯಾರಿದ್ದಾರೆ ಮತ್ತು ತಾವೆಲ್ಲಾ ಮಾಸ್ಟರ್ ಸಾಗರರಾಗಿ ಬಿಟ್ಟಿದ್ದೀರಿ. ಅಂದಮೇಲೆ ಅತಿ ಅದೃಷ್ಟವಂತರಾಗಿದ್ದೀರಲ್ಲವೆ! ಸದಾ ತಮ್ಮ ಭಾಗ್ಯವನ್ನು ಈ ರೀತಿಯಾಗಿರುವುದೆಂದು ತಿಳಿದುಕೊಂಡು ನಡೆಯುತ್ತೀರಾ? ಇಡೀ ದಿನದಲ್ಲಿ ನೆನಪಿರುತ್ತದೆಯೇ ಅಥವಾ ಪ್ರವೃತ್ತಿಯಲ್ಲಿ ಮರೆತುಹೋಗುತ್ತೀರಾ? ಯಾವ ವಸ್ತುವು ತಮ್ಮದಾಗಿ ಬಿಡುತ್ತದೆಯೋ ಅದನ್ನೆಂದಿಗೂ ಮರೆಯುವುದಿಲ್ಲ. ತನ್ನ ವಸ್ತುವಿನ ಮೇಲೆ

ಅಧಿಕಾರವಿರುತ್ತದೆಯಲ್ಲವೆ! ಅಂದಮೇಲೆ ತಂದೆಯನ್ನು ತಮ್ಮವರನ್ನಾಗಿ ಮಾಡಿಕೊಂಡಿದ್ದೀರಿ. ಆದ್ದರಿಂದ ತನ್ನದರ ಮೇಲೆ ಅಧಿಕಾರವಿರುತ್ತದೆ ಯಲ್ಲವೆ. ಅಧಿಕಾರಿಯೆಂದೂ ಸಹ ಮರೆಯಲು ಸಾಧ್ಯವಿಲ್ಲ. ನೆನಪಿನಲ್ಲಿ ನಿರಂತರವಾಗಿ ಇರಲು ಸಾಧನವಾಗಿದೆ- 'ಪ್ರವೃತ್ತಿಯಲ್ಲಿರುತ್ತಾ ಪರ-ವೃತ್ತಿಯಲ್ಲಿ ಇರುವುದು'. ಪರವೃತ್ತಿ ಅರ್ಥಾತ್ ಆತ್ಮಿಕ ರೂಪವಾಗಿದೆ. ಈ ರೀತಿ ಆತ್ಮಿಕ ರೂಪದಲ್ಲಿರುವವರು ಸದಾ ಭಿನ್ನ ಹಾಗೂ ತಂದೆಯ ಪ್ರಿಯರಾಗುತ್ತಾರೆ. ಏನಾದರೂ ಮಾಡುತ್ತಾರೆ ಆದರೆ ಇಂತಹ ಅನುಭವವಾಗುತ್ತದೆ- ಹೇಗೆ ಕೆಲಸವನ್ನು ಮಾಡಲಿಲ್ಲ ಆದರೆ ಆಟವನ್ನಾಡಿದನು. ಆಟದಲ್ಲಿ ಮಜಾ ಬರುತ್ತದೆಯಲ್ಲವೆ ಆದ್ದರಿಂದ ಸಹಜವೆನಿಸುತ್ತದೆ. ಅಂದಮೇಲೆ ಪ್ರವೃತ್ತಿಯಲ್ಲಿರುತ್ತಾ ಆಟವಾಡುತ್ತಾ ಇದ್ದೀರಿ, ಬಂಧನದಲ್ಲಿಲ್ಲ. ಸ್ನೇಹ ಮತ್ತು ಸಹಜಯೋಗದ ಜೊತೆಜೊತೆಗೆ ಶಕ್ತಿಯನ್ನು ಇನ್ನೂ ಒಟ್ಟಿಗೆ ಜಮಾ ಮಾಡುತ್ತೀರೆಂದರೆ, ಮೂರರ ಬ್ಯಾಲೆನ್ಸ್‌ನಿಂದ ಹೈಜಂಪ್ ಮಾಡಬಹುದು.

ಈ ಹೊಸವರ್ಷದಲ್ಲಿ ವಿಶೇಷವಾಗಿ ತಮ್ಮನ್ನು ಸಾಕ್ಷಾತ್ ತಂದೆಯ ಸಮಾನರನ್ನಾಗಿ ಮಾಡಿಕೊಂಡು, ನಾಲ್ಕೂಕಡೆಯಲ್ಲಿ ಚಡಪಡಿಸುತ್ತಿರುವ ಆತ್ಮರಿಗೆ ಲೈಟ್‌ಹೌಸ್, ಮೈಟ್ ಹೌಸ್ ಆಗಿರುತ್ತಾ ಮಾರ್ಗವನ್ನು ತಿಳಿಸುತ್ತಾ ನಡೆಯಿರಿ, ಲಕ್ಷ್ಯವನ್ನಿಡಿ- ಪ್ರತಿಯೊಂದು ಆತ್ಮನಿಗೆ ಏನಾದರೊಂದನ್ನು ಅವಶ್ಯವಾಗಿ ಕೊಡಬೇಕು. ಭಲೆ ಮುಕ್ತಿಯಾಗಲಿ, ಭಲೆ ಜೀವನ್ಮುಕ್ತಿಯಾಗಲಿ. ಯಾರೇ ಮುಕ್ತಿಯವರಾಗಿದ್ದರೆ, ಅವರಿಗೂ ತಂದೆಯ ಪರಿಚಯವನ್ನು ಕೊಟ್ಟು, ಮುಕ್ತಿಯ ವರದಾನವನ್ನು ಕೊಡಿ, ಅಂದಮೇಲೆ ಸರ್ವರ ಪ್ರತಿ ಮಹಾದಾನಿ ಮತ್ತು ವರದಾನಿಯಾಗಿಬಿಡುತ್ತೀರಿ. ತಮ್ಮ-ತಮ್ಮ ಸ್ಥಾನದ ಸೇವೆಯನ್ನಂತು ಮಾಡುತ್ತೀರಿ ಆದರೆ ಈಗ ದೇಹದ್ದಿನ ವಿಶ್ವಕಲ್ಯಾಣಕಾರಿ ಯಾಗಿರಿ. ಒಂದು ಸ್ಥಾನದಲ್ಲಿರುತ್ತಿದ್ದರೂ ಮನಸಾ ಶಕ್ತಿಯ ಮೂಲಕ, ವಾಯುಮಂಡಲ ಮತ್ತು ವೈಬ್ರೇಷನ್‌ನ ಮೂಲಕ ವಿಶ್ವದ ಸೇವೆಯನ್ನು ಮಾಡಬಹುದು. ಯಾವುದರಿಂದ ವಾಯುಮಂಡಲವು ತಯಾರಾಗುತ್ತ ದೆಯೋ, ಅಂತಹ ಶಕ್ತಿಶಾಲಿಯಾದ ವೃತ್ತಿಯನ್ನು ಮಾಡಿಕೊಳ್ಳಬೇಕು.

ಅವ್ಯಕ್ತ ಮುರಳಿ 04-02-1980.

***ಭಾಗ್ಯವಿಧಾತ ತಂದೆ ಮತ್ತು ಭಾಗ್ಯಶಾಲಿ ಮಕ್ಕಳು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸದಾ ತಂದೆಯ ಜೊತೆಯಿಂದ ವಿಜಯವನ್ನು ಪಡೆದಿರುವ ಪಾಂಡವ ಸ್ವರೂಪ.

2. ನನ್ನ ಹೆಸರನ್ನು ಕೇಳುತ್ತಿದ್ದಂತೆಯೇ ಎಲ್ಲರೂ ಸಂತೋಷದಲ್ಲಿ ಬಂದು ಪ್ರೇಮದಲ್ಲಿ ಲೀನವಾಗುವ ಶ್ರೇಷ್ಠ ಗೋಪ/ಗೋಪಿಕೆ.

3. ನಾನು ಶಕ್ತಿ ಮತ್ತು ದೇವಿ-ದೇವತೆಯರ ರೂಪದಲ್ಲಿ ಮಹಿಮೆಯನ್ನು, ಪೂಜೆಯನ್ನು ಪಡೆದಿದ್ದೇನೆ.

4. ನನ್ನ ಗುಣಗಳ ಪ್ರಭಾವದಿಂದ ಸರ್ವರಿಗೆ ಶಾಂತಿ, ಖುಷಿಯ ಅನುಭವವಾಗಿದೆ.

5. ಶ್ರೇಷ್ಠಾತ್ಮನಾದ ನಾನು ಅನೇಕ ವಿಧವಾದ ಸಾಧನಗಳ ಮೂಲಕ ಸರ್ವಾತ್ಮರ ಜೀವನದಲ್ಲಿ ಉತ್ಸಾಹವನ್ನು ತುಂಬುವ ಕರ್ತವ್ಯವನ್ನು ನಿರ್ವಹಿಸಿದ್ದೇನೆ.

6. ನನ್ನ ನಿವಾಸ ಸ್ಥಾನವನ್ನು ನಾನು ತೀರ್ಥ ಸ್ಥಾನವಾಗಿ ತಯಾರು ಮಾಡಿಕೊಂಡಿದ್ದೇನೆ.

7. ನಾನು ಧರ್ಮಯುಗ/ಪುರುಷೋತ್ತಮಯುಗ/ ಸಂಗಮಯುಗದಲ್ಲಿ ಅಮೃತ(ಜ್ಞಾನ)ವನ್ನು ಪಡೆದು ಅಮರವಾಗಿದ್ದೇನೆ.

8. ನಾನು ಪ್ರಕೃತಿಜೀತ್ ಸ್ವರೂಪ.

9. ನಾನು ಆದೇಶ ಕೊಟ್ಟಾಕ್ಷಣ ಪ್ರತಿ ಕಾರ್ಯವಾಗುವ ಸಿದ್ಧಿಸ್ವರೂಪ.